# ‘ಸಿಂಪ್ಲಿ ಮಾ ಸರಸ್ವತಿ!’



ಭಾರತೀಯ ಚಿತ್ರರಂಗ ಕಂಡ ‘ಮಿಲೇನಿಯಮ್ ಗಾಯಕಿ’ ಲತಾ ಮಂಗೇಶ್ಕರ್ (ಸೆ. 28, 1929 – ಫೆ. 6, 2022). ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಬಾನ್ಸುರಿಯಲ್ಲಿ ಸಾಧನೆಯ ಶಿಖರ ಪಂ. ರೋಣು ಮಜುಂದಾರ್! ಇವರಿಬ್ಬರ ನಡುವೆ ಸುಮಾರು ಐವತ್ತು ವರ್ಷಗಳ ಒಡನಾಟ. ಲತಾ ದೀದಿ ಜೊತೆಗಿನ ತಮ್ಮ ಒಡನಾಟ, ಬಾಂಧವ್ಯವನ್ನು ಪಂ. ರೋಣು ಮಜುಂದಾರ್ ಅವರು ವಿಶೇಷವಾಗಿ ‘ಸುಧಾ’ ಓದುಗರಿಗಾಗಿಯೇ ಹಂಚಿಕೊಂಡಿದ್ದಾರೆ.

**■ ನಿರೂಪಣೆ: ಉಮಾ ಅನಂತ್**

‘ಲತಾಜೀ ಈ ಶತಮಾನ ಕಂಡ ಅಪ್ರತಿಮ ಗಾಯಕಿ. ನನಗೂ ಲತಾ ದೀದಿಗೂ ಸುಮಾರು ಐವತ್ತು ವರ್ಷಗಳ ಒಡನಾಟ. ‘ಶಿ ಈಸ್ ಸಿಂಪ್ಲಿ ಮಾ ಸರಸ್ವತಿ.’ ಲತಾಜಿ ಅವರು ಹಾಡಿರುವ ಮುನ್ನೂರಕ್ಕೂ ಹೆಚ್ಚು ಹಾಡುಗಳಿಗೆ ನಾನು ಬಾನ್ಸುರಿ ನುಡಿಸಿದ್ದೇನೆ. ಹಿಂದಿ ಸಿನಿಮಾದ ಹೆಚ್ಚಿನ ಹಾಡುಗಳು ಸೂಪರ್ ಹಿಟ್ ಕೂಡ ಆಗಿವೆ.

ಶಾಸ್ತ್ರೀಯ ಸಂಗೀತ ವಿಚಾರಕ್ಕೆ ಬಂದರೆ ಲತಾ ಮಂಗೇಶ್ಕರ್ ಹಾಡಿದ ಜನಪ್ರಿಯವಾದ ಮೀರಾ ಭಜನ್ ‘ಪಾಯೋಜಿ ಮೈನೆ ರಾಮ ರತನ...’, ಗಾಂಧೀಜಿ ಅವರಿಗೆ ಪ್ರಿಯವಾಗಿದ್ದ ‘ವೈಷ್ಣವ ಜನತೊ...’ ಹಾಡುಗಳಿಗೆ ನಾನು ಬಾನ್ಸುರಿ ನುಡಿಸಿರುವೆ; ಎರಡೂ ಹಾಡುಗಳು ಇಂದಿಗೂ ಬಹು ಜನಪ್ರಿಯ!

## ಮೀನೂಟ ಇಷ್ಟ

ಲತಾ ಅವರಿಗೆ ಮೀನೂಟ ಎಂದರೆ ಬಹಳ ಇಷ್ಟ. ಅವರ ಮನೆಗೆ ಹೋದರೆ ಊಟ ಮಾಡದೆ ಹೊರಡಲು ಬಿಡುತ್ತಿರಲಿಲ್ಲ. ಮರಾಠಿ ಶೈಲಿಯ ಅಡುಗೆ ಚೆನ್ನಾಗಿ ಮಾಡುತ್ತಿದ್ದರು. ಮನೆಗೆ ಬಂದವರಿಗೆ ಖುಷಿಯಿಂದ ಕೈಯಾರೆ ಅಡುಗೆ ಮಾಡಿ ಖುಷಿಯಿಂದ ಬಡಿಸುತ್ತಿದ್ದರು. ಅನೇಕ ಬಾರಿ ಅವರೊಂದಿಗೆ ಊಟ ಮಾಡಿದ್ದೇನೆ.

ಲತಾಜಿ ಚಿಕ್ಕವಳಿರುವಾಗಲಿಂದಲೂ ದಕ್ಷಿಣ ಮುಂಬಯಿಯಲ್ಲಿರುವ ‘ಪ್ರಭು ಕುಂಜ್’ ಎಂಬ ಅವರ ಮನೆಗೆ ಹೋಗುತ್ತಿದ್ದೆ. ಅವರೂ ನನ್ನ ಸ್ಟುಡಿಯೊಗೆ ಬರುತ್ತಿದ್ದರು. ಅವರನ್ನು ನೋಡಿದ್ರೆ ಸಾಕ್ಷಾತ್ ಸರಸ್ವತಿಯನ್ನು ನೋಡಿದ ಹಾಗಾಗುತ್ತಿತ್ತು. ಬಹಳ ದಯೆ, ತಾಳ್ಮೆ ಇರುವ ಲತಾ ದೀದಿ ಎಲ್ಲರನ್ನು ಬಹಳ ಪ್ರೀತಿಸುತ್ತಿದ್ದರು. ಅವರನ್ನು ನಾನು ಮೊದಲ ಬಾರಿಗೆ ಭೇಟಿ ಮಾಡಿದ್ದು ಮುಂಬಯಿಯ ರೆಕಾರ್ಡಿಂಗ್ ಸ್ಟುಡಿಯೊದಲ್ಲಿ. ಅವರ ಗಾಯನ, ಸಂಗೀತ ರಿಯಾಜ್, ಸಾಧನೆ ಬಗ್ಗೆ ಸಾಕಷ್ಟು ತಿಳಿದುಕೊಂಡಿದ್ದ ನನಗೆ ಪ್ರಥಮ ಬಾರಿಗೆ ಕಂಡಾಗ ಅಕ್ಷರಶಃ ಕಣ್ಣಲ್ಲಿ ನೀರು ಬಂತು. ಅಷ್ಟೊಂದು ಸರಳತೆ, ಜನರ ಮೇಲಿನ ಅಕ್ಕರೆ, ಮೆದುವಾದ ಹದವರಿತ ಮಾತು, ಮಾತಿನ ಶೈಲಿ... ನಿಜಕ್ಕೂ ಹೆಮ್ಮೆಪಟ್ಟೆ.

ಮುಂದೆ ಮುಂಬಯಿಯಲ್ಲಿ ನನ್ನ ರೆಕಾರ್ಡಿಂಗ್ ಸ್ಟುಡಿಯೊಗೆ ಕೂಡ ಬರುತ್ತಿದ್ದರು. ಅವರು